<u>ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಸಿ.ಸಿ. ನಂಃ 1100/2023

ಸಿ.ಡಬ್ಲ್ಯೂಃ 01
ಪಿ.ಡಬ್ಲ್ಯೂಃ 01

ಸಾಕ್ಷಿದಾರರ ಹೆಸರುಃ - ಕರಿಯಪ್ಪ ಪುಟ್ಟಪ್ಪ ಹರಿಜನ

ವಯಸ್ಸು - 37 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ನೀಡಗುಂದಿ

ದಿನಾಂಕಃ 22.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತನನನ್ನು ನೋಡಿ ಗುರುತಿಸಲಾಯಿತು. ವಾಹನ ಚಲಾಯಿಸುತ್ತಿದ್ದವರು 1 ನೇ ಆರೋಪಿ ಈರಣ್ಣ . ದಿ. 03.03.2022 ರಂದು ನಾನು ನನ್ನ ತಾಯಿಯವರನ್ನು ಕರೆದುಕೊಂಡು ಮಧ್ಯಾಹ್ನ 3.30 ಗಂಟೆಗೆ ಬಂಕಾಪುರ ಆಸ್ಪತ್ರೆಗ ಬೈಕಿನಲ್ಲಿ ಹೋಗುತ್ತಿದೆ. ಬೈಕ ನಂ. ಕೆಎ-27-3133. ಬಾಡಾದ ರಸ್ತೆಯಲ್ಲಿ ಟಾಟಾ ಎ.ಸಿ.ಯ ಎಡಬಂದಿಯಲ್ಲಿ ಹೋಗುತ್ತಿತ್ತು. ನಾವು ಬಲಗಡೆ ಹೋಗುತ್ತಿದ್ದೇವು ಆಗ ಒಂದೇ ಸಮಯ ಟಾಟಾ ಎ.ಸಿ ಬಲಗಡೆ ತಿರುಗಿದ್ದು ಹಿಂಬಂದಿಯಲ್ಲಿ ನಮಗೆ ಡಿಕ್ಕಿ ಪಡಿಸಿದ್ದ ಕಾರಣ ನಾವು ಬಾವಿ ಹತ್ತಿರ ಕಾಲುವೆ ಇತ್ತು. ಅಲ್ಲಿ ಬಿದ್ದೇವು. ನನಗೆ ಎಡ ಗೈ ಪೆಟ್ಟಾಗಿದೆ. ನನ್ನ ತಾಯಿಗೆ ಬಲ ಚಪ್ಪಿ ಮುರಿದಿತ್ತು. ಅದೇ ಗಾಡಿಯಲ್ಲಿ ನಮ್ಮನ್ನೂ ಕರೆದುಕೊಂಡು ಶಿಗ್ಗಾಂವ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ನನ್ನ ತಾಯಿಯ ವರ ಚಿಕಿತ್ಸೆ ಮಾಡಿಸಿದ್ದೇವು. ಅವರಿಗೆ ಬಲಗೈ ಮೂಳೆ ಮುರಿದಿದೆ ಎಂದು ತಿಳಿಯಿತು. ಚಿಕಿತ್ಸೆ ಯಾದ ನಂತರ ನಾವು ನಮ್ಮ ಊರಿಗೆ ಹೋದೇವು. ದಿ. 08.03.2022 ರಂದು ದೂರು ನೀಡಿದ್ದೇವು. ಆರೊಪಿನಂ. 1 ರವರ ತಪ್ಪಿನಿಂದ ಅಪಘಾತವಾಗಿದೆ. ವಾಹನವನ್ನು

ಬೇಜಾವಾಬ್ದಾರಿಯಿಂದ ಚಲಾಯಿಸುತ್ತಿದ್ದರು. ವಾಹನ ಸಂಖ್ಯೆ ಹೇಳಲು ಬರುವುದಿಲ್ಲ. ನಾನು ತೋರಿಸಿದ ಅಪಘಾತವಾದ ಸ್ಥಳದಲ್ಲಿ ಪೋಲಿಸರು ಪಂಚನಾಮೆಯನ್ನು ಮಾಡಿದ್ದರು. ಸಾಕ್ಷಿಗೆ ಈಗ ಘಟನಾ ಜಾಗದ ಪಂಚನಾಮೆಯನ್ನು ತೋರಿಸಿದ್ದು ಅವರ ಸಹಿಯನ್ನು ಗುರುತಿಸಿದ್ದ ಮೇರೆಗೆ ಅದನ್ನು ನಿ.ಪಿ-2 ಮತ್ತು ಅವರ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಿದ್ದು ಅವರನ್ನು ಅವರು ಗುರುತಿಸಿದ ಮೇರೆಗೆ ಅವುಗಳನ್ನು ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ಹಾತ್ ನಕಾಶೆಯನ್ನು ತಯಾರಿಸಿ ಪೋಟೋಗಳನ್ನು ತೆಗೆಯಲಾಯಿತು. ಪಂಚನಾಮೆಯನ್ನು ಅದೇ ದಿವಸ ಘಟನಾ ಜಾಗದಲ್ಲಿ ಮಧ್ಯಾಹ್ನ 02.00 ರಿಂದ 3.00 ಗಂಟೆವರೆಗೆ ಜರುಗಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನನ್ನ ವಾಹನ ಸಂಖ್ಯೆ ಕೆಎ-27-ಎಸ್ 3533 ಎಂದರೆ ಸರಿ . ಟಾಟಾ ಎ.ಸಿ. ನಂ. ಕೆಎ-27 ಎ-4417 ಎಂದು ಬರೆಸಿದ್ದೇನೆ ಎಂದರೆ ಸರಿ. ವಾಹನ ಚಾಲಕನು ಜೋರಾಗಿ ನಿಷ್ಕಾಳಜಿತನದಿಂದ ಬಲಗಡೆ ತಿರುಗಿಸಿದ ಕಾರಣ ಅಪಘಾತವಾಗಿದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಪಂಚನಾಮೆಯ ಕಾಲಕ್ಕೆ ಚಾಸಾ-2 ಮತ್ತು3 ರವರು ಸಹಿಯನ್ನು ಘಟನಾ ಜಾಗದಲ್ಲಿ ಪಡೆದುಕೊಂಡಿದ್ದರೆ ಎಂದರೆ ಸರಿ.

<u>ಪಾಟೀ ಸವಾಲುಃ</u> ಶ್ರೀ ಕೆ. ಎಸ್. ಜೆ. ಆರೋಪಿ ಪರ ವಕೀಲರು ಪಾಟಿಸವಾಲಿಗೆ ಕಾಲಾವಕಾಶ ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಅದೆ.

ಜೆ. ಎಂ. ಎಫ್. ಸಿ., ಶಿಗ್ಗಾಂವ.

ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ

ಸಿ.ಸಿ. ನಂಃ 1100/2023

ಸಿ.ಡಬ್ಲ್ಯೂಃ 03
ಪಿ.ಡಬ್ಲ್ಯೂಃ 02

ಸಾಕ್ಷಿದಾರರ ಹೆಸರುಃ - ಫಕ್ಕಿರೇಶ ಯಲ್ಲಪ್ಪ ಹರಿಜನ

ವಯಸ್ಸು - 35 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ಬಾಡಾ

ದಿನಾಂಕಃ 22.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ಈಗ ಪಂಚನಾಮೆಯನ್ನು ತೋರಿಸಿದ್ದು ಅವರ ಸಹಿಯನ್ನು ಗುರುತಿಸಿದ ಮೇರೆಗೆ ಅದು ಈಗಾಲೇ ನಿ.ಪಿ-2 ಎಂದು ಗುರುತಿಸಲಾಗಿತ್ತು ಮತ್ತು ಅವರ ಸಹಿ ನಿ.ಪಿ-2(ಬಿ ) ಎಂದು ಗುರುತಿಸಲಾಗಿತು. ಸಾಕ್ಷಿಗೆ ಈಗ ಪೋಟೋವನ್ನು ತೋರಿಸಿದ್ದು ಅವರು ಗುರುತಿಸಿದ್ದು ಅದು ಈಗಾಗಲೇ ನಿ.ಪಿ-3 ಮತ್ತು 4 ಎಂದು ಗುರುತಿಸಲಾಗಿದೆ. ಪೋಟೋ ಯಾವ ಕಾರಣಕ್ಕೆ ತೆಗೆದರು ಎಂದು ಗೊತ್ತಿಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೋಲಿಸ ಠಾಣೆಗೆ ಹೋದಾಗ ಕೆಲವು ಕಾಗದಗಳ ಮೇಲೆ ನನ್ನ ಸಹಿ ಪಡೆದುಕೊಂಡಿದ್ದರು. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ದಿ. 08-03-2022 ರಂದು ಮಧ್ಯಾಹ್ನ 02.00 ರಿಂದ 3.00 ಗಂಟೆವರೆಗೆ ನಿನ್ನ, ಚಾಸಾ-2, 1 ರವರ ಹಾಗೂ ಪೋಲಿಸ ಸಿಬ್ಬಂದಿಯವರ ಸಮಕ್ಷಮ ಘಟನೆ ಜಾಗದಲ್ಲಿ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ಹಾತ್ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಸಂಪೂರ್ಣ ಮಾಹಿತಿ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಓದಿ ಹೇಳಿದ ಮೇಲೆ ಸಹಿ ನೋಡಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀ ಕೆ ಎಸ್ ಜೆ ಆರೋಪಿ ಪರ ವಕೀಲರು ಪಾಟಿಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಅದೆ.

ಜೆ. ಎಂ. ಎಫ್. ಸಿ., ಶಿಗ್ಗಾಂವ.

Pancha